ಅದೇ ರೀತಿ ಸರ್ಕಾರಿ ಸಾಲವನ್ನು (ಅಸಲು) ದಿನಾಂಕ: 31.03.2005 ರೊಳಗೆ ಪಾವತಿಸುವ ಎಲ್ಲಾ ನೇಕಾರ ಸಹಕಾರ ಸಂಘಗಳು ಮತ್ತು ನೇಕಾರರಿಗೆ ಅರ್ಹ ಸಾಲದ ಮೇಲಿನ ಬಡ್ಡಿ ಮನ್ನಾ ಆಗಲಿದೆ.

ಈ) 2004–05ನೇ ಸಾಲಿಗೆ ವಿದ್ಯುತ್ ಸಬ್ಸಿಡಿ ರೂ. 3.25 ಕೋಟಿ. ಬಡ್ಡಿ ಮನ್ನಾ ರೂ. 10.83 ಕೋಟಿ

4(440) ಶ್ರೀ ಅಕ್ಕಿ ಮಲ್ಲಿಕಾರ್ಜುನ್ ಸಹದೇವಪ್ಪ (ಕುಂದಗೋಳ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) 2001 ರಿಂದ 2004ರ ವರೆಗೆ ಧಾರವಾಡ ಜಿಲ್ಲೆಯಲ್ಲಿ ಮಂಜೂರಾದ ನಬಾರ್ಡ್ ರಸ್ತೆಗಳ ಸಂಖ್ಯೆ ಎಷ್ಟು?

ಆ) 2001 ರಿಂದ 2004ರ ವರೆಗೆ ಕುಂದಗೋಳ ತಾಲ್ಲೂಕಿಗೆ ಮಂಜೂರಾದ ರಸ್ತೆಗಳು ಎಷ್ಟು?

ಇ) ಇಲ್ಲಿಯವರೆಗೆ ಅಪೂರ್ಣವಾದ ನಬಾರ್ಡ್ ರಸ್ತೆಗಳು ಎಷ್ಟು?

ಈ) ಕುಂದಗೋಳ ತಾಲ್ಲೂಕಿನಲ್ಲಿ ಸಂಶಿಯಿಂದ ಗುಡಿಗೇರಿ ರಸ್ತೆ ಕಳಪೆ ಮಟ್ಟದಾಗಿದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಹೆಚ್.ಡಿ. ಶಿವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಧಾರವಾಡ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ನಬಾರ್ಡ್ ಯೋಜನೆಯಡಿ 2000–01 ರಿಂದ 2003–04ರ ವರೆಗೆ 17.10 ಕೋಟಿ ರೂ. ಮೊತ್ತದ 14 ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಆ) ಈ ಅವಧಿಯಲ್ಲಿ ಕುಂದಗೋಳ ತಾಲ್ಲೂಕಿನಲ್ಲಿ 4.64 ಕೋಟಿ ರೂ. ಮೊತ್ತದ 3 ರಸ್ತೆ ಕಾಮಗಾರಿಗಳನ್ನು ಕೈಗತ್ತಿಕೊಳ್ಳಲಾಗಿದೆ.

ಇ) ಧಾರವಾಡ ಜಿಲ್ಲೆಯಲ್ಲಿ 4 ಕಾಮಗಾರಿಗಳು ಇನ್ನೂ ಪ್ರಗತಿಯಲ್ಲಿವೆ.

ಈ) ಈ ರಸ್ತೆ ಕಾಮಗಾರಿ ಕಳಪೆ ಮಟ್ಟದ್ದಾಗಿರುವುದಿಲ್ಲ. ರಸ್ತೆಯ ಖಡೀಕರಣ ಮುಗಿದ ನಂತರ ಗುತ್ತಿಗೆದಾರರು ಕೆಲಸವನ್ನು ಸ್ಥಗಿತಗೊಳಿಸಿದ್ದು ವಾಹನ ಸಂಚಾರದಿಂದಾಗಿ ಅಲ್ಲಲ್ಲಿ ರಸ್ತೆಯ ಮೇಲ್ಪೈ ಹಾಳಾಗಿರುತ್ತದೆ. ಈ ರಸ್ತೆಯ ಕಾಮಗಾರಿಗಳು ಗುತ್ತಿಗೆದಾರರು ಮನರಾರಂಭಿಸಿದ್ದು ರಸ್ತೆಯ ಮೇಲ್ಪೈಯನ್ನು ಸರಿಪಡಿಸಿ ಡಾಂಬರೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

5(458) ಶ್ರೀ ಅಕ್ಕಿ ಮಲ್ಲಿಕಾರ್ಜುನ್ ಸಹದೇವಪ್ಪ (ಕುಂದಗೋಳ) : ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಧಾರವಾಡ ಜಿಲ್ಲೆಗೆ 2004–05ರಲ್ಲಿ ಸಾಮಾಜಿಕ ಅರಣ್ಯ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಹಣ ಎಷ್ಟು;

ಆ) 2004–05ರಲ್ಲಿ ಯಾವ ಯಾವ ಯೋಜನೆಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ)

ಬಿಡುಗಡೆಯಾದ ಹಣ (ರೂ.)	ಬಿಡುಗಡೆಯಾದ ಆಹಾರ ಧಾನ್ಯ (ಮೆ.ಟನ್)	ಆಹಾರ ಧಾನ್ಯ ಮೊತ್ತ (ರೂ.)	ಒಟ್ಟು (ರೂ.)
54,56,900–00	337.917	21,11,969–00	75,68,869–00